ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 06-08-1970 ಭಾಗ - 1

*ಬಂಧನಮುಕ್ತ ಆತ್ಮರ ಲಕ್ಷಣಗಳು* (बन्धन मुक्त आत्मा की निशानी)

ಈಗ ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗಿ ವ್ಯಕ್ತ ದೇಹದ ಆಧಾರವನ್ನು ಪಡೆದು ನೋಡುತ್ತಿದ್ದೇವೆ ಎಂಬ ಅನುಭವ ಮಾಡುತ್ತಿದ್ದೀರಾ? ಯಾವುದಾದರೂ ಸ್ಥೂಲ ಸ್ಥಾನದಲ್ಲಿ ಪ್ರವೇಶ ಮಾಡುವಂತೆ ಈ ಸ್ಥೂಲ ದೇಹದಲ್ಲಿ ಪ್ರವೇಶ ಮಾಡಿ ಈ ಕಾರ್ಯವನ್ನು ಮಾಡುತ್ತಿದ್ದೇವೆ ಎಂಬ ಅನುಭವವಾಗುತ್ತದೆಯೇ? ಯಾವಾಗ ಬೇಕೋ ಆಗ ಪ್ರವೇಶ ಮಾಡುವುದು ಮತ್ತು ಯಾವಾಗ ಬೇಕೋ ಆಗ ಮತ್ತೆ ಬೇರೆಯಾಗುವುದು, ಇಂತಹ ಅನುಭವ ಮಾಡುತ್ತಿದ್ದೀರಾ? ಒಂದು ಕ್ಷಣದಲ್ಲಿ ಧಾರಣೆ ಮಾಡುವುದು ಮತ್ತು ಒಂದು ಕ್ಷಣದಲ್ಲಿ ಬಿಡುವುದು ಈ ಅಭ್ಯಾಸವಿದೆಯಾ? ಹೇಗೆ ಸ್ಥೂಲ ವಸ್ತುಗಳನ್ನು ಯಾವಾಗ ಬೇಕೋ ಆಗ ತೆಗೆದುಕೊಳ್ಳುವುದು ಮತ್ತು ಯಾವಾಗ ಬೇಕೋ ಆಗ ಬಿಡುತ್ತೀರೋ ಹಾಗೆಯೇ ಈ ದೇಹದ ಭಾವನೆಯನ್ನು ಯಾವಾಗ ಬೇಕೋ ಆಗ ಬಿಟ್ಟು ದೇಹಿ ಅಭಿಮಾನಿಯಾಗಬೇಕು. ಸ್ಥೂಲ ವಸ್ತುವಿನದು ಸಹಜವಾಗಿರುವಷ್ಟು ಈ ಅಭ್ಯಾಸ ಸರಳವಾಗಿದೆಯೇ? ಯಾವಾಗ ಬೇಕೋ ಆಗ ರಚನೆಯ ಆಧಾರವನ್ನು ತೆಗೆದುಕೊಂಡು ಯಾವಾಗ ಬೇಕೋ ಆಗ ಆಧಾರವನ್ನು ಬಿಡುವಂತಹ ರಚಯಿತರಾಗಿದ್ದೀರಾ? ಯಾವಾಗ ಬೇಕೋ ಆಗ ಅತೀತ, ಯಾವಾಗ ಬೇಕೋ ಆಗ ಪ್ರಿಯರಾಗುವುದು, ಇಷ್ಟು ಬಂಧನ ಮುಕ್ತರಾಗಿರುವಿರಾ? ಈ ದೇಹದ ಬಂಧನವೂ ಇದೆ. ದೇಹ ತನ್ನ ಬಂಧನದಲ್ಲಿ ಬಂಧಿಸುತ್ತದೆ. ದೇಹಬಂಧನದಿಂದ ಮುಕ್ತವಾದರೆ... ಈ ದೇಹ ಬಂಧನ ಹಾಕುವುದಿಲ್ಲ ಆದರೆ ಕರ್ತವ್ಯದ ಆಧಾರವೆಂದು ತಿಳಿದು ಆಧಾರವನ್ನು ಯಾವಾಗ ಬೇಕೋ ಆಗ ತೆಗೆದುಕೊಳ್ಳಬಹುದು ಈ ರೀತಿಯ ಅಭ್ಯಾಸ ನಡೆಯುತ್ತಿರುತ್ತದೆಯೇ? ದೇಹದ ಭಾವನೆಯನ್ನು ಬಿಡುವ ಅಥವಾ ಅದರಿಂದ ಬೇರೆಯಾಗಲು ಎಷ್ಟು ಸಮಯ ಬೇಕು? ಒಂದು ಕ್ಷಣ ಬೇಕಾಗುತ್ತದೆಯೇ? ಸದಾ ಒಂದು ಕ್ಷಣ ಬೇಕಾಗುತ್ತದಾ ಅಥವಾ ಕೆಲವೊಮ್ಮೆ ಬೇರೆ ಬೇರೆಯಾ? (ಒಮ್ಮೊಮ್ಮೆ ಒಂದೊಂದು ರೀತಿ) ಎಲ್ಲಾ ಬಂಧನಗಳಿಂದ ಮುಕ್ತರಾಗಿಲ್ಲವೆಂದು ಇದರಿಂದ ಸಿದ್ಧವಾಗುತ್ತದೆ. ಎಷ್ಟು ಬಂಧನಮುಕ್ತರೋ ಅಷ್ಟು ಯೋಗಯುಕ್ತರಾಗುವರು ಮತ್ತು ಎಷ್ಟು ಯೋಗಯುಕ್ತರೋ ಅಷ್ಟು ಜೀವನಮುಕ್ತಿಯಲ್ಲಿ ಉನ್ನತ ಪದವಿಯ ಪ್ರಾಪ್ತಿಯಾಗುತ್ತದೆ. ಬಂಧನ ಮುಕ್ತರಾಗದಿದ್ದರೆ ಯೋಗಯುಕ್ತರಾಗುವುದಿಲ್ಲ. ಅವರನ್ನು ಮಾಸ್ಟರ್ ಸರ್ವಶಕ್ತಿವಂತ ಎನ್ನಲಾಗುವುದೇ? ದೇಹದ ಸಂಬಂಧ ಮತ್ತು ದೇಹದ ಪದಾರ್ಥದ ಸೆಳೆತ ದೂರ ಮಾಡುವುದು ಸರಳವಾಗಿದೆ. ಆದರೆ ದೇಹದ ಭಾವನೆಯಿಂದ ಮುಕ್ತರಾಗಬೇಕು. ಬೇಕಾದಾಗ ವ್ಯಕ್ತದಲ್ಲಿ ಬರುವ ಅಭ್ಯಾಸವನ್ನು ಈಗ ಹೆಚ್ಚು ಮಾಡಬೇಕು. ತಂದೆ ಆಧಾರ ತೆಗೆದುಕೊಂಡು ಮಾತನಾಡುತ್ತಿದ್ದಾರೆ ಅಂತೆಯೇ ನಾವೂ ದೇಹದ ಆಧಾರ ಪಡೆದು ಕರ್ಮ ಮಾಡುತ್ತಿದ್ದೇವೆ ಎಂದು ತಿಳಿಯಿರಿ. ಈ ಅತೀತ ಸ್ಥಿತಿಗನುಸಾರ ಪ್ರಿಯರಾಗುವಿರಿ. ಎಷ್ಟು ಈ ಅತೀತತೆಯ ಅಭ್ಯಾಸದಲ್ಲಿ ಮುಂದುವರೆಯುವಿರೋ ಅಷ್ಟು ವಿಶ್ವಕ್ಕೆ ಪ್ರಿಯರಾಗಲು ಮುಂದಿರುವಿರಿ. ಸರ್ವರ ಸ್ನೇಹಿಯಾಗಲು ಮೊದಲು ಅತೀತರಾಗಬೇಕು. ಸೇವೆ ಮಾಡುತ್ತಾ, ಸಂಕಲ್ಪ ಮಾಡುತ್ತಾ ತಮಗೂ ಮತ್ತು ಬೇರೆಯವರಿಗೂ ಇವರು ಅತೀತ ಮತ್ತು ಅತಿ ಪ್ರಿಯರಾಗಿದ್ದಾರೆ ಎಂದು ಅನುಭವವಾಗಬೇಕು. ಯಾರು ಎಷ್ಟು ಅತೀತರೋ ಅಷ್ಟು ಬೇರೆಯವರನ್ನು ತಂದೆಗೆ ಪ್ರಿಯರನ್ನಾಗಿ ಮಾಡಬಹುದು.

***ಸೇವೆಯ ಸಫಲತೆಯ ಸ್ವರೂಪವೇನು? (ಎಲ್ಲರ ಭಿನ್ನ-ಭಿನ್ನ ವಿಚಾರ ಬಂದವು) ಎಲ್ಲಾ ಆತ್ಮರನ್ನು ತಂದೆಗೆ ಸ್ನೇಹಿ ಮತ್ತು ತಂದೆಯ ಕರ್ತವ್ಯದಲ್ಲಿ ಸಹಯೋಗಿ ಮತ್ತು ಪುರುಷಾರ್ಥದಲ್ಲಿ ಆ ಆತ್ಮರನ್ನು ಶಕ್ತಿರೂಪ ಮಾಡುವುದೇ ಸೇವೆಯ ಸಫಲತೆಯ ಸ್ವರೂಪವಾಗಿದೆ. ಯಾವ ಆತ್ಮರಿಗೆ ಸೇವೆ ಮಾಡುವಿರೋ ಆ ಆತ್ಮರಲ್ಲಿ ಈ ಮೂರೂ ಯೋಗ್ಯತೆಗಳು ಪ್ರತ್ಯಕ್ಷ ರೂಪದಲ್ಲಿ ಕಂಡು ಬರಬೇಕು.*** ಈ ಮೂರರಲ್ಲಿ ಒಂದು ಗುಣದ ಕೊರತೆಯಿದ್ದರೂ ಸೇವೆಯ ಸಫಲತೆಯಲ್ಲಿಯೂ ಕೊರತೆಯಿರುವುದು, ತಿಳಿಯಿತೇ?

ಈ ಸಫಲತೆಯ ಸ್ವರೂಪವನ್ನು ಪ್ರಯೋಗದಲ್ಲಿ ತರಬಹುದಾದ ಮುಖ್ಯ ಯಾವ ಮಾತನ್ನು ಗಮನದಲ್ಲಿಟ್ಟುಕೊಳ್ಳಬೇಕು ಮತ್ತು ಕರ್ಮದಲ್ಲಿ ಧಾರಣೆ ಮಾಡಬೇಕು? ಬಹಳ ಸಹಜವಾಗಿದೆ. ಕಠಿಣ ಮಾತನ್ನು ಗಮನ ಕೊಟ್ಟು ಧಾರಣೆ ಮಾಡುತ್ತೀರಿ ಮತ್ತು ಸಹಜ ಮಾತನ್ನು ಬಿಡುವುದರಿಂದ ಸಹಜವಾದುದರ ಧಾರಣೆ ತಡವಾಗಿ ಆಗುತ್ತದೆ. ಇದು ಗೊತ್ತಿದೆಯಾ? ಇದೇನು ದೊಡ್ಡ ಮಾತಲ್ಲ, ಆಗುತ್ತದೆ ಎಂದು ತಿಳಿಯುತ್ತೀರಿ. ನಂತರ ಏನಾಗುತ್ತದೆ? ಆಗುವುದು, ಆಗುವುದು ಎನ್ನುತ್ತಾ ಮರೆತುಹೋಗುವುದು. ಆದ್ದರಿಂದ ಧಾರಣೆಯ ರೂಪವೂ ಆಗುವುದಿಲ್ಲ. ಹಾಗಾದರೆ ಆ ಮಾತನ್ನು ಧಾರಣೆ ಮಾಡಿದರೆ ಸಫಲತೆಯ ಸ್ವರೂಪವಾಗುವಂತಹ ಅದಾವ ಒಂದು ಮಾತಾಗಿದೆ? (ಸಾಕ್ಷಿತನ) ಈ ಮಾತು ಸರಿಯಾಗಿದೆ. ಇಂದು ಸಹ ಬಾಪ್ ದಾದಾ  ಸಾಕ್ಷಿ ಸ್ಥಿತಿಯಲ್ಲಿ ರಾಖಿ ಕಟ್ಟಲು ಬಂದಿರುವರು. ಈ ಸಾಕ್ಷಿತನದ ರಾಖಿ ಸದಾ ಬಂಧಿಸಲ್ಪಟ್ಟಿದ್ದರೆ ಸೇವೆಯ ಸಫಲತೆ ಬಹಳ ಬೇಗನೆ ಸಿಗುವುದು. ಈಗ ಯಾವ ಕರ್ತವ್ಯಕ್ಕೆ ಒಂದು ತಿಂಗಳು ಬೇಕೋ ಆ ಕರ್ತವ್ಯಕ್ಕಾಗಿ ಒಂದು ಗಂಟೆಯೂ ಬೇಕಾಗುವುದಿಲ್ಲ. ಈ ಸಾಕ್ಷಿತನದ ರಾಖಿ ಕಟ್ಟಿಸಿಕೊಳ್ಳಬೇಕು. ಬೇರೆಯವರಿಗೆ ಪವಿತ್ರತೆಯ ರಾಖಿ ಕಟ್ಟುತ್ತೀರಿ ಆದರೆ ಬಾಪ್ ದಾದಾ ಇಂದು ಈ ಸಾಕ್ಷಿತನದ ರಾಖಿ ಕಟ್ಟುತ್ತಿದ್ದಾರೆ. ಎಷ್ಟು ಸಾಕ್ಷಿಯಾಗಿರುವಿರೋ ಅಷ್ಟು ಸಾಕ್ಷಾತ್ಕಾರ ಮೂರ್ತಿ ಮತ್ತು ಸಾಕ್ಷಾತ್ ಮೂರ್ತಿಯಾಗುವಿರಿ, ಸಾಕ್ಷಿತನ ಕಡಿಮೆಯಾಗುವುದರಿಂದ ಸಾಕ್ಷಾತ್ ಮತ್ತು ಸಾಕ್ಷಾತ್ಕಾರಮೂರ್ತಿ ಕಡಿಮೆಯಾಗುವಿರಿ. ಆದ್ದರಿಂದ ಈ ಅಭ್ಯಾಸ ಮಾಡಿ. ಯಾವ ಅಭ್ಯಾಸ? ಈಗೀಗ ಆಧಾರ ತೆಗೆದುಕೊಳ್ಳುವುದು, ಈಗೀಗ ಬೇರೆಯಾಗುವುದು. ಈ ಅಭ್ಯಾಸವನ್ನು ಹೆಚ್ಚಿಸಿಕೊಳ್ಳುವುದು ಎಂದರೆ ಸಂಪೂರ್ಣತೆ ಮತ್ತು ಸಮಯವನ್ನು ಸಮೀಪ ತರುವುದು. ಈಗ ಯಾವ ಪ್ರಯತ್ನವನ್ನು ಮಾಡಬೇಕು? ಸಮಯ ಮತ್ತು ಸಂಪೂರ್ಣತೆಯನ್ನು ಸಮೀಪ ತನ್ನಿ ಮತ್ತು ತಮ್ಮ ರೇಕಾರ್ಡ  ಸರಿಯಾಗಿಟ್ಟುಕೊಳ್ಳಲು ಎಲ್ಲರಿಗೂ ಗೌರವ ಕೊಡಬೇಕು ಎಂಬ ಒಂದು ಮಾತನ್ನು ವಿಶೇಷ ಗಮನದಲ್ಲಿ ಇಟ್ಟುಕೊಳ್ಳಬೇಕು. ಯಾರು ಸರ್ವರಿಗೂ ಎಷ್ಟು ಗೌರವ ಕೊಡುವರೋ ಅಷ್ಟು ತಮ್ಮ ರಿಕಾರ್ಡ್ ಸರಿಯಾಗಿರುವುದು. ಬೇರೆಯವರಿಗೆ ಗೌರವ ಕೊಡುವುದು ಎಂದರೆ ತಮ್ಮ ರೆಕಾರ್ಡ ಸರಿಯಾಗಿ ಇಟ್ಟುಕೊಳ್ಳುವುದು. ಕಡಿಮೆ ಗೌರವ ಕೊಟ್ಟರೆ ತಮ್ಮ ರೆಕಾರ್ಡ ಕಡಿಮೆ ಮಾಡಿಕೊಳ್ಳುವುದು. ಆದ್ದರಿಂದ ಈ ಮುಖ್ಯ ಮಾತಿನ ಆವಶ್ಯಕತೆಯಿದೆ, ತಿಳಿಯಿತೇ? ಹೇಗೆ ಯಜ್ಞದ ಸಹಯೋಗಿಗಳಾಗುವುದೇ ಸಹಯೋಗ ಪಡೆಯುವುದಾಗಿದೆಯೋ ಹಾಗೆ ಗೌರವ ಕೊಡುವುದೇ ಗೌರವ ತೆಗೆದುಕೊಳ್ಳುವುದಾಗಿದೆ. ಕೊಡುವಿರಿ ತೆಗೆದುಕೊಳ್ಳುವುದಕ್ಕಾಗಿ. ಒಂದು ಸಾರಿ ಕೊಡುವುದರಿಂದ ಅನೇಕ ಸಾರಿ ತೆಗೆದುಕೊಳ್ಳಲು ಅಧಿಕಾರಿಗಳಾಗುವಿರಿ. ಚಿಕ್ಕವರಿಗೆ ಪ್ರೀತಿ ಮತ್ತು ಹಿರಿಯರಿಗೆ ನಮಸ್ಕಾರ ಎಂದು ಹೇಳುತ್ತಾರೆ ಆದರೆ ಎಲ್ಲರಿಗೂ ದೊಡ್ಡವರೆಂದು ತಿಳಿದು ಗೌರವ ಕೊಡುವುದೇ ಸರ್ವರಿಂದಲೂ ಸ್ನೇಹ ಪಡೆದುಕೊಳ್ಳುವ ಸಾಧನವಾಗಿದೆ. ಈ ಮಾತೂ ಸಹ ವಿಶೇಷ ಗಮನ ಕೊಡವ ಯೋಗ್ಯ ಮಾತಾಗಿದೆ. ಪ್ರತಿಯೊಂದು ಮಾತಿನಲ್ಲಿ ಮೊದಲು ತಾವು ಎಂಬುದನ್ನು ವೃತ್ತಿ, ದೃಷ್ಟಿ ವಾಣಿ ಮತ್ತು ಕರ್ಮದಲ್ಲಿ ತರಬೇಕು. ಎಷ್ಟು ಮೊದಲು ತಾವು ಎನ್ನುವಿರೋ ಅಷ್ಟು ವಿಶ್ವದ ತಂದೆಯ ಸಮಾನ ಆಗುವಿರಿ.

ವಿಶ್ವದ ತಂದೆಯ ಸಮಾನದ ಅರ್ಥವೇನಾಗಿದೆ? ಒಂದಾಗಿದೆ ವಿಶ್ವದ ತಂದೆಯ ಸಮಾನರಾಗುವುದು, ಎರಡನೆಯದಾಗಿದೆ ವಿಶ್ವ ರಾಜನ್ ಆಗುವುದು ಅದನ್ನೂ ವಿಶ್ವದ ತಂದೆ ಎಂದೇ ಎನ್ನಲಾಗುತ್ತದೆಯಲ್ಲವೇ? ವಿಶ್ವದ ರಾಜ ವಿಶ್ವದ ತಂದೆಯಲ್ಲವೇ? ವಿಶ್ವದ ತಂದೆಯೂ ಆಗುವಿರಿ ಮತ್ತು ವಿಶ್ವದ ತಂದೆಯ ಸಮಾನರೂ ಆಗುವಿರಿ.  ಹೇಗೆ? ಮೊದಲು ತಾವು ಎನ್ನುವುದರಿಂದ. ತಿಳಿಯಿತೇ? ನಿರ್ಮಾಣರಾಗುವುದರಿಂದ ಪ್ರತ್ಯಕ್ಷ ಪ್ರಮಾಣವಾಗುವಿರಿ. ನಿರ್ಮಾನರಾಗುವುದರಿಂದ ವಿಶ್ವದ ನಿರ್ಮಾಣ ಮಾಡಬಲ್ಲಿರಿ. ತಿಳಿಯಿತೇ? ಇಂತಹ ಸ್ಥಿತಿಯನ್ನು ಧಾರಣೆ ಮಾಡುವುದರಿಂದ ಸಾಕ್ಷಿತನದ ರಾಖಿ ಕಟ್ಟಬಹುದು. ಮೊದಲೇ ಸಾಕ್ಷಿತನದ ರಾಖಿ ಕಟ್ಟಿಕೊಂಡು ಹೋದಾಗ ರಾಖಿಯ ಸೇವೆ ಸಫಲತಾಪೂರ್ವಕ ಆಗುವುದು. ತಿಳಿಯಿತೇ?

**ಗುಂಪಿನೊಂದಿಗೆ:-**

ಸಮ್ಮೇಳನ ಮಾಡುತ್ತಿರುವಿರಿ, ಸಮ್ಮೇಳನದ ಅರ್ಥವೇನಾಗಿದೆ? ಸರ್ವ ಆತ್ಮರ ಮಿಲನ. ಸರ್ವ ಆತ್ಮಗಳ ಮಿಲನ ಯಾರೊಂದಿಗೆ ಮಾಡುವಿರಿ? ತಂದೆಯ ಜೊತೆಗೆ. ಇತ್ತೀಚಿನ ಸಮಯ ಎಂತಹದು? ಸಂಪೂರ್ಣತೆಯ ಸಮಯ ಸಮೀಪ ಬರುವುದಾಗಿದೆ ಆದ್ದರಿಂದ ವರ್ತಮಾನ ಸಮಯಕ್ಕನುಸಾರ ನಿಶ್ಚಿತವಾಗಿದೆ. ಕಲ್ಪದ ಹಿಂದೆಯೂ ಪುರುಷಾರ್ಥ ನಿಮಿತ್ತಮಾತ್ರ ಮಾಡಿಸಲಾಗಿತ್ತು. ಈಗ ಪುರುಷಾರ್ಥ ಆದರೆ ಪ್ರಾಪ್ತಿ ಮುಂದೆಂದೋ ಅಲ್ಲ, ಈಗೀಗ ಪುರುಷಾರ್ಥ ಈಗೀಗ ಪ್ರಾಪ್ತಿ, ಈ ರೀತಿಯ ಪುರುಷಾರ್ಥವಿದೆಯೇ? ಸ್ವಯಂ ಪ್ರಾಪ್ತಿ ಸ್ವರೂಪರಾದಾಗ ಅನೇಕ ಆತ್ಮರಿಗೆ ಪ್ರಾಪ್ತಿ ಮಾಡಿಸಬಲ್ಲಿರಿ. ಸ್ವಯಂ ಪ್ರಾಪ್ತಿ ಸ್ವರೂಪರಾಗಿರದಿದ್ದರೆ ಬೇರೆಯವರಿಗೆ ಹೇಗೆ ಪ್ರಾಪ್ತಿ ಮಾಡಿಸುವಿರಿ? ಈಗ ಮಾಡಿಸದಿದ್ದರೆ ಮತ್ತೆ ಯಾವಾಗ ಮಾಡಿಸುವಿರಿ? "ಯಾವಾಗ' ಶಬ್ದ ಸಮಾಪ್ತಿಯಾಗಿ ಈಗ ಪ್ರತಿಯೊಂದು ಮಾತಿನಲ್ಲಿ "ಈಗ'. ಇಷ್ಟು ಪರಿವರ್ತನೆ ವಾಣಿ, ಕರ್ಮ ಮತ್ತು ಸಂಕಲ್ಪದಲ್ಲಿ ತರಬೇಕು. ಸಂಕಲ್ಪದಲ್ಲಿಯೂ ಯಾವಾಗಲಾದರೂ ಮಾಡುವೆವು, ಯಾವಾಗಲಾದರೂ ಆಗುವುದು ಎಂದು ಈಗ ಬರಬಾರದು. ಈಗಲೇ ಆಗುವುದು. ಈ ರೀತಿಯ ಪರಿವರ್ತನೆ ಮಾಡಬೇಕು ಆಗ ಸೇವೆಯ ಸಫಲತೆಯಿದೆ. ಸ್ವಯಂನಲ್ಲಿಯೇ ಯಾವಾಗಲಾದರೂ ಆಗುವುದು ಎಂದಿದ್ದರೆ ತಮ್ಮ ಪ್ರಜೆಯೂ ಸಹ ಬಹಳ ಚೆನ್ನಾಗಿದೆ ಆದರೆ ಯಾವಾಗಲಾದರೂ ಮಾಡಿದರಾಯಿತು, ಯಾವಾಗಲಾದರೂ ಆಗುವುದು ಎಂದು "ಯಾವಾಗಲಾದರೂ ಎಂಬುದರ ಮೇಲೆ ನಿರ್ಧರಿಸುವ ಕೊನೆಯ ವರ್ಗದ ಪ್ರಜೆಯಾಗುವರು. ಈಗ ಸಮೀಪದ ಪ್ರಜೆಗಳನ್ನು ತಯಾರು ಮಾಡಬೇಕು. ಸಮೀಪದ ಪ್ರಜೆಗಳನ್ನು ಮಾಡಲು ನಾಜೂಕುತನವನ್ನು ಬಿಡಬೇಕು. ವೈಯ್ಯಾರದಿಂದ ನಡೆಯುವುದನ್ನು ಬಿಟ್ಟು ರಹಸ್ಯಯುಕ್ತರಾಗಿ ನಡೆಯಬೇಕು. ಎಚ್ಚರಗೇಡಿತನ , ನಾಜೂಕುತನವಾಗಿದೆ. ಎಷ್ಟೆಷ್ಟು ರಹಸ್ಯಯುಕ್ತರಾಗುವಿರೋ ಅಷ್ಟಷ್ಟು ನಾಜೂಕುತನ ಬಿಡುವುದು, ಆತ್ಮೀಯತೆಯ ಒಂದೇ ರೂಪ ಸದಾ ಇರುತ್ತದೆಯೇ? ರೂಪ ಬದಲಿಸುವುದರ ಬದಲು ಈ ಶರೀರದ ಭಾವನೆಯನ್ನು ಬಿಡಬೇಕು. ಈ ಅಭ್ಯಾಸದಲ್ಲಿರಬೇಕು, ಶರೀರ ಬಿಡುವ ಅಭ್ಯಾಸವಿದ್ದರೆ ರೂಪ ಬದಲಿಸುವುದು ಬಿಟ್ಟು ಹೋಗುವುದು. ಮುಖ್ಯ ಮಾತಾಗಿದೆ ಅಧ್ಯಯನದಲ್ಲಿಯೂ ನಿಯಮಿತರಾಗಿರುವುದು (ರೆಗ್ಯುಲರ್), ಕೇವಲ ಬರು ನಿಯಮಿತತೆಯಲ್ಲ, ಪ್ರತಿಯೊಂದು ಮಾತಿನಲ್ಲಿ ನಿಯಮಿತತೆ, ಎಷ್ಟು ನಿಯಮಿತತೆಯೋ ಅಷ್ಟು ಆಳುವವರಾಗುವಿರಿ ಹಾಗಾದರೆ ಏನು ಮಾಡಬೇಕು? ಎಲ್ಲಾ ಮಾತುಗಳಲ್ಲಿ ನಿಯಮಿತ. ಅಮೃತವೇಳೆ ಏಳುವುದರಿಂದ ಹಿಡಿದು ಪ್ರತಿ ಕರ್ಮ, ಪ್ರತಿ ಸಂಕಲ್ಪ ಮತ್ತು ಪ್ರತಿ ಮಾತಿನಲ್ಲಿ ನಿಯಮಿತ, ಒಂದು ಮಾತೂ ವ್ಯರ್ಥವಾಗುವಂತಹುದಲ್ಲ. ಈ ಜಗತ್ತಿನ ಗಣ್ಯ ವ್ಯಕ್ತಿಗಳು ಭಾಷಣ ಮಾಡುವಾಗ ಅವರ ಮಾತುನಾಡುವಂತಹ ಶಬ್ದಗಳನ್ನು ನಿರ್ಧರಿಸಲಾಗುತ್ತದೆ. ತಾವೂ ದೊಡ್ಡ ವ್ಯಕ್ತಿಗಳಲ್ಲವೇ? ಹಾಗಾದರೆ ತಮ್ಮ ಮಾತು ನಿರ್ಧರಿತವಾಗಿರಬೇಕು. ಮಾಯೆಯ ಮಿಶ್ರಣವಾಗಿರಬಾರದು. ಈ ರೀತಿ ನಿಯಮಿತರಾಗುವವರ ಸೇವೆಯಲ್ಲಿ ಸಫಲತೆಯಿದ್ದೇ ಇದೆ. ಸಮ್ಮೇಳನದ ಪ್ರತಿಯೊಂದು ಕಾರ್ಯವನ್ನು ಮಾಡುತ್ತಾ ನಾವು ವಿಶ್ವದ ಮುಂದೆ ಸಾಕ್ಷಾತ್ಕಾರ ಮೂರ್ತಿ ಎಂಬುದನ್ನು ಎಂದೂ ಮರೆಯಬಾರದು. ಸಾಕ್ಷಾತ್ಕಾರ ಮೂರ್ತಿಯಾದಾಗ ತಮ್ಮಿಂದ ಬಾಪ್ ದಾದಾರ ಸಾಕ್ಷಾತ್ಕಾರ ಸ್ವತಃ ಆಗುವುದು, ಸ್ವಯಂ ಜ್ಞಾನ, ಯೋಗದ ಪ್ರತ್ಯಕ್ಷ ಪ್ರಮಾಣವಾದಾಗ ಅದನ್ನು ಮಾಡಲು ಸಾಧ್ಯ. ತಮ್ಮನ್ನು ಎಷ್ಟು ಪ್ರತ್ಯಕ್ಷ ಪ್ರಮಾಣ ಮಾಡಿಕೊಳ್ಳುವಿರೋ ಅಷ್ಟು ತಂದೆಯನ್ನು ಪ್ರತ್ಯಕ್ಷ ಮಾಡಬಲ್ಲಿರಿ.

ಅವ್ಯಕ್ತ ಮುರಳಿ 06-08-1970.

***ಬಂಧನಮುಕ್ತ ಆತ್ಮರ ಲಕ್ಷಣಗಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗಸ್ಥಿತಿ .**

ನಾನಾತ್ಮ ಜ್ಞಾನ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ಅವ್ಯಕ್ತ ಸ್ಥಿತಿಯಲ್ಲಿದ್ದು ವ್ಯಕ್ತ ದೇಹದ ಆಧಾರದಿಂದ ಕಾರ್ಯವನ್ನು ಮಾಡುವ ಅನುಭವ ಮಾಡಿಕೊಂಡಿದ್ದೇನೆ.

2. ನಾನು ಈ ದೇಹದಲ್ಲಿ ಬೇಕಾದಾಗ ಪ್ರವೇಶಿಸಿ ಮತ್ತು ಬೇಕಾದಾಗ ಅತೀತವಾಗುವ ಅಭ್ಯಾಸ ಮಾಡುವ ಆತ್ಮಾಭಿಮಾನಿ.

3. ನಾನು ಒಂದು ಕ್ಷಣದಲ್ಲಿ ದೇಹ ಭ್ರಾಂತಿಯನ್ನು ಸಮಾಪ್ತಿ ಮಾಡಿ, ಬಂಧನ ಮುಕ್ತ, ಯೋಗಯುಕ್ತವಾಗಿ ಜೀವನ್ಮುಕ್ತಿಯನ್ನು ಪಡೆದಿರುವ ಮಾಸ್ಟರ್ ಸರ್ವಶಕ್ತಿವಂತನು.

4. ನಾನು ಅತೀತ ಸ್ಥಿತಿಯ ಅಭ್ಯಾಸದಿಂದ ವಿಶ್ವಕ್ಕೆ ಪ್ರಿಯವಾಗಿ ಸರ್ವರಿಗೆ ಸ್ನೇಹಿಯಾಗಿ ಸೇವೆಯನ್ನು ಮಾಡುತ್ತಾ ಅತೀತ ಮತ್ತು ಅತಿಪ್ರಿಯತೆಯನ್ನು ಅನುಭವ ಮಾಡಿಕೊಂಡಿದ್ದೇನೆ.

5. ನಾನು ಸರ್ವಾತ್ಮರನ್ನು ತಂದೆಗೆ ಸಹಯೋಗಿ & ಶಕ್ತಿಶಾಲಿಯಾಗಿ ಮಾಡಿರುವ ಸಫಲತಾ ಸ್ವರೂಪ.

6. ನಾನು ಸಾಕ್ಷಿ ಸ್ಥಿತಿಯಲ್ಲಿರುವ  ಸಾಕ್ಷಾತ್ಕಾರ ಮೂರ್ತಿ.

7. ನಾನು ಬಾಪ್ ದಾದಾರರೊಂದಿಗೆ ಸಾಕ್ಷಿ ಸ್ಥಿತಿಯ ರಾಖಿಯನ್ನು ಕಟ್ಟಿಸಿಕೊಂಡು ಸದಾ ಸೇವೆಯಲ್ಲಿ ಸಫಲತೆಯನ್ನು ಹೊಂದಿರುವ ಸಫಲತಾ ಮೂರ್ತಿ.

8. ನಾನು ಸಂಪೂರ್ಣತೆಯನ್ನು ಮತ್ತು ಸಮಯವನ್ನು ಸಮೀಪಕ್ಕೆ ತಂದಿದ್ದೇನೆ.

9. ನಾನು ಸರ್ವರಿಗೆ ಗೌರವವನ್ನು ಕೊಟ್ಟು ನನ್ನ ರೆಕಾರ್ಡನ್ನು ಸರಿ ಮಾಡಿಕೊಂಡಿದ್ದೇನೆ.

10. ನಾನು ವೃತ್ತಿ, ದೃಷ್ಟಿ, ವಾಣಿ ಮತ್ತು ಕರ್ಮದಲ್ಲಿ "ಮೊದಲು ತಾವು" ಎಂಬ ವಿಷಯವನ್ನು ಧಾರಣೆ ಮಾಡಿರುವ ಶಿವ ತಂದೆಯ ಸಮಾನ ಸ್ವರೂಪ.

11. ನಾನು ನಿರ್ಮಾನತೆಯಿಂದ ಪ್ರತ್ಯಕ್ಷ ಪ್ರಮಾಣವಾಗಿ ತಯಾರಾಗಿ ವಿಶ್ವ ನಿರ್ಮಾಣ ಮಾಡಿದ್ದೇನೆ.